ದಿ.29.03.2021 ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : ವಾದಿ ಪರ ಶ್ರೀ ಡಿ.ಜೆ.ಆರ್.ವಕೀಲರಿಂದ**

ವಾದಿಯ ವ್ಯಾಜ್ಯದ ಜಮೀನನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ಸರ್ವೆ ನಂಬರ್ 8 ಎಂದರೆ ಸರಿ, ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ, ದಕ್ಷಿಣಕ್ಕೆ ಸರ್ಕಾರಿ ಜಮೀನು ಎಂದರೆ ಸಾಕ್ಷಿ ಸಂಜೀವಪ್ಪನ ಮನೆ ಎಂದು ಹೇಳುತ್ತಾರೆ, ಉತ್ತರಕ್ಕೆ ಸಂಜೀವಪ್ಪನ ಮನೆ ಎಂದರೆ ಸಾಕ್ಷಿ ಹನುಮಂತರಾಯಪ್ಪನ ಖಾಲಿ ನಿವೇಶನ, ಮಂಜಮ್ಮನ ಮನೆ ಮತ್ತು ಸರ್ಕಾರಿ ಶಾಲೆ ಎಂದು ಹೇಳುತ್ತಾರೆ.

ಹನುಮಂತರಾಯಪ್ಪ ಸಂಜೀವಪ್ಪನ ಮಗ ಎಂದರೆ ಸರಿ. ಸಂಜೀವಪ್ಪ ನೇಗೆ ರಾಮಯ್ಯರವರಿಂದ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಂಜೀವಪ್ಪ ಮೃತರಾದ ನಂತರ ಅವರ ಮಗ ಹನುಮಂತರಾಯನ ಸ್ವಾಧೀನದಲ್ಲಿ ಉತ್ತರಕ್ಕೆ ಇರುವ ನಿವೇಶನ ಇದೆ ಎಂದರೆ ಸರಿ.

ಬಸವರಾಜಪ್ಪನವರು ದಾವೆ ಹೂಡಿದ ನಂತರ ವಾದಿಗೆ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ನಾನು ಅಳತೆ ಮಾಡಿಸಿಲ್ಲ. ವಾದಿ ಒಟ್ಟು ಐದು ಜನರ ಮೇಲೆ ದಾವೆ ಹೂಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಗುಡಿಸಲು ಮನೆ ವಾದಿಗೆ ಸೇರಿದ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದರೆ ಸರಿ. ರತ್ನಮ್ಮನ ಗುಡಿಸಲು ಮನೆಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿಗೆ 3 ನೇ ಪ್ರತಿವಾದಿಯ ಗುಡಿಸಲು ಮನೆ ಇದೆ ಎಂದರೆ ಸರಿ.

ಈರಣ್ಣನ ಮನೆಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿಗೆ 1 ನೇ ವಾದಿಗೆ ಸೇರಿದ ಗುಡಿಸಲು ಮನೆ ಇದೆ ಎಂದರೆ ಸರಿ. ಪಾಲಕ್ಕನ ಗುಡಿಸಲು ಮನೆಗೆ ಹೊಂದಿಕೊಂಡಂತೆ ಪಶ್ಚಿಮಕ್ಕೆ ನಿಮಗೆ ಸೇರಿದ ಗುಡಿಸಲು ಮನೆ ಇದೆ ಎಂದರೆ ಸರಿ. ನಿಮ್ಮ ಗುಡಿಸಲು ಮನೆಯಾದ ನಂತರ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ.

1 ರಿಂದ 3 ನೇಪ್ರತಿವಾದಿಯರ ಮನೆ ಯ ದಕ್ಷಿಣಕ್ಕೆ ವಾದಿಗೆ ಸೇರಿದ ಖಾಲಿ ಜಾಗ ಇದೆ ಎಂದರೆ ಸಾಕ್ಷಿ ಅವರ ಕೇಳಿಕೊಂಡು ಹಾಕಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಗುಡಿಸಲು ಮನೆಯ ದಕ್ಷಿಣ ದಿಕ್ಕಿಗೂ ವಾದಿಗೆ ಸೇರಿದ ಖಾಲಿ ಜಾಗ ಇದೆ ಎಂದರೆ ಸರಿಯಲ್ಲ. ನಿಮ್ಮ ಗುಡಿಸಲು ಮನೆ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ ಪೂ-ಪ 19 ಅಡಿ, ಉ-ದ 12 ಎಂದು ಹೇಳುತ್ತಾರೆ. ನಿಮ್ಮ ಗುಡಿಸಲು ಮನೆಯ ದಕ್ಷಿಣ ದಿಕ್ಕಿಗೆ ಏನು ಇದೆ ಎಂದರೆ ಸಾಕ್ಷಿ ಹನುಮಂತರಾಯಪ್ಪನ ನಿವೇಶನ ಇದೆ ಎಂದು ಹೇಳುತ್ತಾರೆ. ನಿಮ್ಮ ಗುಡಿಸಲು ಮನೆಯ ಉತ್ತರ ದಿಕ್ಕಿಗೆ ಏನು ಇದೆ ಎಂದರೆ ಸಾಕ್ಷಿ ಹನುಮಂತರಾಯಪ್ಪನ ನಿವೇಶನ ಮತ್ತು ಮನೆ ಇದೆ ಎಂದು ಹೇಳುತ್ತಾರೆ.

ನಿಮ್ಮ ಗುಡಿಸಲು ಮನೆಯ ದಕ್ಷಿಣ ದಿಕ್ಕಿಗೆ ಇರುವ ಹನುಮಂತರಾಯಪ್ಪನ ನಿವೇಶನ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಗುಡಿಸಲು ಮನೆಯ ದಕ್ಷಿಣ ದಿಕ್ಕಿಗೆ ಇರುವ ಹನುಮಂತರಾಯಪ್ಪನ ನಿವೇಶನದಲ್ಲಿ ಏನು ಇದೆ ಎಂದರೆ ಸಾಕ್ಷಿ ಖಾಲಿ ಇದೆ ಎಂದು ಹೇಳುತ್ತಾರೆ.

ನೀವು ಮತ್ತು ಹನುಮಂತರಾಯಪ್ಪನವರು ವಿಶ್ವಾಸದಿಂದ ಚನ್ನಾಗಿ ಇದ್ದೀರಾ ಎಂದರೆ ಸಾಕ್ಷಿ ಏನು ಇಲ್ಲ ಅವರಷ್ಟಗೆ ಅವರು ನಮ್ಮಷ್ಟಗೆ ನಾವು ಇದ್ದೇವೆ ಎಂದು ಹೇಳುತ್ತಾರೆ. ವಾದಿ ಹನುಮಂತರಾಯಪ್ಪನ ಮೇಲೂ ದಾವೆ ಹೂಡಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ಹನುಮತಂರಾಯಪ್ಪ ಏನು ತಕರಾರು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಹನುಮತಂರಾಯಪ್ಪ ಯಾವ ವಕೀಲರನ್ನು ತಮ್ಮ ಪರವಾಗಿ ನೇಮಕ ಮಾಡಿಕೊಂಡಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನೀವು ಮತ್ತು ಹನುಮತಂರಾಯಪ್ಪ ಷರೀಕ್ ಆಗಿ ಸುಳ್ಳು ತಕರಾರು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ನಿವೇಶನವನ್ನು ಸರ್ಕಾರದ ವತಿಯಿಂದ ಮಂಜೂರು ಮಾಡಲಾಗಿದೆ ಎಂದು ಹೇಳಿದ್ದು, ಸದರಿ ಜಮೀನಿನ ಸರ್ವೆ ನಂಬರ್ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಮನೆ ಯಾವ ಜಮೀನಿನ ಸರ್ವೆ ನಂಬರ್ ನಲ್ಲಿ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ನಿಮ್ಮ ಮನೆ ಸರ್ವೆ ನಂಬರ್ 235(ನಿ.ಡಿ.-30) ರಲ್ಲಿ ಇದೆ ಎಂದು ನ್ಯಾಯಾಲಯ ಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ . ನಿ.ಡಿ.-30 ರಲ್ಲಿ ನೀವು ಕಟ್ಟಿಕೊಂಡಿರುವ ಮನೆ ಆಸ್ತಿಯು ರೆವಿನ್ಯೂ ವ್ಯಾಪ್ತಿಗೆ ಬರುತ್ತದೆ ಎಂದರೆ ಸಾಕ್ಷಿ ಏನೋ ಪಂಚಾಯಿತಿಯಿಂದ ನೀಡಿದ್ದರು ಎಂದು ಹೇಳುತ್ತಾರೆ. ರೆವಿನ್ಯೂ ಜಮೀನನ್ನು ಪಂಚಾಯಿತಿಯವರು ಸ್ವಾಧೀನಕ್ಕೆ ಪಡೆದುಕೊಂಡಿದ್ದರೆ ಪಂಚಾಯಿತಿ ಸುಬದ್ದಿಗೆ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ನಮ್ಮ ಸುಬದ್ದಿನಲ್ಲಿ ಇದೆ ಎಂದು ಹೇಳುತ್ತಾರೆ.

ರೆವಿನ್ಯೂ ಜಮೀನಿನಲ್ಲಿ ನಿವೇಶನವನ್ನು ಹಂಚಿಕೆ ಮಾಡಿದ್ದರೆ ತಹಶೀಲ್ದಾರ್ ರವರ ಹಕ್ಕು ಪತ್ರ ನೀಡುತ್ತಾರೆ ಎಂದರೆ ಸಾಕ್ಷಿ ಪಂಚಾಯಿತಿಯಿಂದ ನೀಡಿದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 235 ಜಮೀನಿನಲ್ಲಿ ನಿವೇಶನವನ್ನು ಹಂಚಲು ಪಂಚಾಯಿತಿಗೆ ಯಾವುದೇ ಹಕ್ಕು ಇಲ್ಲಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಪಂಚಾಯಿತಿಯಿಂದ ನಿವೇಶವನ್ನು ಹಂಚಬೇಕಾದರೆ ಠರಾವು ಮಾಡಿ ನಿವೇಶನವನ್ನು ಹಂಚಲಾಗುತ್ತದೆ ಎಂದರೆ ಸಾಕ್ಷಿ ನನ್ನ ತಾಯಿಗೆ ಇಲ್ಲ ಎಂದೇ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಾಯಿಗೆ ಪಂಚಾಯಿತಿಯಿಂದ ನಿವೇಶನವನ್ನು ಮಂಜೂರು ಮಾಡಲಾಗಿದೆ ಎಂದು ತೋರಿಸಲು ಪಂಚಾಯಿತಿಯಲ್ಲಿ ಆದ ಠರಾವನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ನಿ.ಡಿ.-8 ರಂತೆ ದಾಖಲೆಯನ್ನು ಮಂಜೂರು ಮಾಡಲು ಪಂಚಾಯಿತಿಯವರಿಗೆ ಹಕ್ಕು ಇಲ್ಲ ನೀವು ಪಂಚಾಯಿತಿಯೊಂದಿಗೆ ಷರೀಕ್ ಆಗಿ ಸೃಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನಿ.ಡಿ.-8 ರ ದಾಖಲೆಯನ್ನು ಆಧಾರ ಮಾಡಿಕೊಂಡು ನಿ.ಡಿ.-9 ರಿಂದ 29 ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನೀವು ಗುಡಿಸಲು ಮನೆಯನ್ನು ವಾದಿಗೆ ಸೇರಿದ ದಾವಾ ಆಸ್ತಿಯಲ್ಲಿ ಅಕ್ರಮವಾಗಿ ಕಟ್ಟಿಕೊಂಡಿದ್ದೀರಾ ಎಂದರೆ ಸರಿಯಲ್ಲ.

ಪ್ರತಿವಾದಿ 1 ರಿಂದ 3ರವರು ವಾದಿಯ ಒಪ್ಪಿಗೆ ಮೇರೆಗೆ ಗುಡಿಸಲು ಮನೆಯನ್ನು ಕಟ್ಟಿಕೊಂಡಿದ್ದು, ನೀವು ಅಕ್ರಮವಾಗಿ ಗುಡಿಸಲು ಮನೆ ಕಟ್ಟಿಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ಹೆಂಗೇ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ, ನನ್ನ ತಾಯಿಗೆ ಮಂಜೂರಾದ ನಿವೇಶನದಲ್ಲಿ ನಾನು ಇದ್ದೇನೆ ಎಂದು ಹೇಳುತ್ತಾರೆ. ನೀವು ಅಕ್ರಮವಾಗಿ ಗುಡಿಸಲನ್ನು ಕಟ್ಟಿಕೊಂಡಿರುವುದರಿಂದ ಪ್ರತಿವಾದಿ 1 ರಿಂದ 3 ರವರು ಸಹ ವಾದಿಗೆ ಜಾಗ ಬಿಟ್ಟು ಕೊಡಲು ತಕರಾರು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾನು ಏಕೆ ಬಿಡಲಿ ನಮ್ಮ ಜಾಗದಲ್ಲಿ ಹಾಕಿಕೊಂಡಿದ್ದೇನೆ ಎಂದು ಹೇಳುತ್ತಾರೆ.

ದಾವೆಯನ್ನು ಹೂಡಿದ ನಂತರ ನಿಮ್ಮ ಗುಡಿಸಲು ಮನೆ ಇರುವ ಜಾಗ ಸರ್ವೆ ನಂಬರ್ 235 ರಲ್ಲಿ ಬರುತ್ತದೋ ಅಥವಾ ವಾದಿಯ ಜಾಗದಲ್ಲಿ ಇದೆಯೋ ಎಂದು ಅಳತೆ ಮಾಡಿ ನೋಡಿದ್ದೀರಾ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಸರ್ವೆ ನಂಬರ್ 235 ರಲ್ಲಿ ಗುಡಿಸಲು ಮನೆ ಕಟ್ಟಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದು, ವಾದಿಯ ಜಮೀನಲ್ಲೇ ಅಕ್ರಮವಾಗಿ ಗುಡಿಸಲು ಮನೆ ಕಟ್ಟಿಕೊಂಡಿದ್ದೀರಾ ಎಂದರೆ ಸರಿಯಲ್ಲ.

ವಾದಿಯ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದು ಹೇಳಿದರೆ ನಿಮ್ಮ ಮನೆ ಕಿತ್ತಾಕುತ್ತಾರೆ ಎಂಬ ಕಾರಣದಿಂದ ಸರ್ವೆ ನಂಬರ್ 235 ರಲ್ಲಿ ಕಟ್ಟಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ವಾದಿಗೆ ಸೇರಿದ ವ್ಯಾಜ್ಯದ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ. ವಾದಿಯ ಜಮೀನನ್ನು ಲಪಾಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಗುಡಿಸಲು ವಾದಿಯ ಜಮೀನಲ್ಲಿ ಇದೆಯೋ ಅಥವಾ ಸರ್ವೆ ನಂಬರ್ 235 ರಲ್ಲಿ ಇದೆಯೋ ಎಂದು ಅಳತೆ ಮಾಡಿಸಲು ನಿಮಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಚಳ್ಳಕೆರೆ.